ಓ ಎಸ್ ನಂ 199/2017

ಪಿ. ಡಬ್ಲ್ಯೂ ಃ 3

ದಿಃ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಪಿ ಕೆ ವಕೀಲರಿಂದ ಃ

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ನಾನು ಲೇಬರ್ ಕಂಟ್ರ್ಯಾಕ್ಟರ್ ಎಂದು ಹೇಳಿದ್ದು, ಸದರಿ ವಿಷಯಕ್ಕೆ ಸಂಬಂದಪಟ್ಟಂತೆ ನಾನು ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ.

ನಾನು ದಿನಾಂಕ ಃ 01.01.1963 ರಲ್ಲಿ ಹುಟ್ಟಿರುತ್ತೇನೆ. ಶಿವರುದ್ರಯ್ಯ ನವರು ದಾವಾ ಸ್ವತ್ತನ್ನು ದಿನಾಂಕ ಃ 14.04.1968 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಖರೀದಿ ಮಾಡಿದಾಗ ನನಗೆ 6 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನಗೆ ಆ ಸಮಯದಲ್ಲಿ ಶಿವರುದ್ರಯ್ಯ ನವರು ಜಮೀನನ್ನು ಖರೀದಿ ಮಾಡಿರುವ ವಿಚಾರ ಗೊತ್ತಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನನಗೆ 1968 ರಲ್ಲಿ ಸಣ್ಣ ವಯಸ್ಸಾದ ಕಾರಣ ನನಗೆ ವಾದಿಗಳ ಮತ್ತು ಪ್ರತಿವಾದಿಗಳ ಕುಟುಂಬದ ವಿಚಾರದ ಬಗ್ಗೆ ಏನು ಗೊತ್ತಿರಲಿಲ್ಲ ಎಂದರೆ ಸರಿ. ನಾನು ಕೇತೋಹಳ್ಳಿಯಲ್ಲಿ ವಾಸವಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ದಿನಾಂಕ ಃ 20.01.1968 ಮತ್ತು 14.04.1968 ರಲ್ಲಿ ಜಮೀನನ್ನು ಖರೀದಿ ಮಾಡಿರುವ ವಿಚಾರ ನಾನು ಸಣ್ಣ ಹುಡುಗನಾಗಿದ್ದ ಕಾರಣ ನನಗೆ ಆ ಸಮಯದಲ್ಲಿ ಗೊತ್ತಿರಲಿಲ್ಲ ಎಂದರೆ ಸರಿ.

ನಾನು 1990 ರಿಂದ ಈಚೆಗೆ ಲೇಬರ್ ಕಂಟ್ರ್ಯಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ದಿನಾಂಕ ಃ 20.01.1968 ಮತ್ತು 14.04.1968 ರ ಕ್ರಯದ ಬಗ್ಗೆ ಬರೆಯುವುದಕ್ಕೆ ನನಗೆ ಆ ವಿಚಾರ ಗೊತ್ತಿರುತ್ತದೆ. ಆದರೆ ನಾನು ಈವರೆಗೂ ಸದರಿ ಕ್ರಯಪತ್ರಗಳನ್ನು ನೋಡಿರುವುದಿಲ್ಲ. ಆ ಕ್ರಯಪತ್ರ ಸರಿ ಇದೆಯೋ ಇಲ್ಲವೋ ಎನ್ನುವ ವಿಚಾರ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನನಗೆ ವಾದಿ ನೆಂಟರು/ಸಂಬಂಧಿಕರು ಮತ್ತು ಸ್ನೇಹಿತರು ಆಗಿರುವುದಿಲ್ಲ. ನನ್ನ ಜಮೀನುಗಳು ದಾವಾ ಸ್ವತ್ತಿನಿಂದ ಸ್ವಲ್ಪ ದೂರದಲ್ಲಿ ಇರುತ್ತವೆ. ನನ್ನ ಜಮೀನುಗಳು ದಾವಾ ಸ್ವತ್ತಿನಿಂದ 1 ಕಿ.ಮೀಟರ್ ದೂರದಲ್ಲಿರುತ್ತದೆ, ನಾನು ನನ್ನ ಜಮೀನಿಗೆ ಹೋಗಬೇಕಾದರೆ ದಾವಾ ಸ್ವತ್ತಿನ ಮೇಲೆ ಹೋಗಬೇಕಾಗುತ್ತದೆ.

2010 ನೇ ಇಸವಿಯವರೆಗೂ ನಾನು ಕೇತೋಹಳ್ಳಿಯಲ್ಲಿ ಇರುವುದನ್ನು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಸ್ವತ್ತು ಈಗಾಗಲೇ ಮಾರಾಟ ಆಗಿದ್ದು, ವಾದಿ ಮತ್ತು ಅವರ ತಂದೆ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಪ್ರತಿವಾದಿ 6 ರವರ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸುಳ್ಳು. ನಾನು ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು ತುಮಕೂರಿನಿಂದ ಬಂದಿರುತ್ತೇನೆ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**